# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಬಿಡಿ/2587/2021 ಬಹುಮಹಡಿಗಳ ಕಟ್ಟಡ,
ಮಂಡನಾಧಿಕಾರಿಗಳ ಶಾಖೆ, ಪಿ.ಓ. ಎ.ಆರ್.ಇ.17 ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 08/12/2021

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3)ರ ಅನ್ವಯ ವರದಿ

*****

ವಿಷಯ: ಸರ್ಕಾರಿ ನೌಕರರಾದ ಶ್ರೀ ಗೋಪಾಲಪ್ಪ ಟಿ. ಬಿನ್ ತಿಮ್ಮರಾಯಪ್ಪ, ಗ್ರಾಮ ಲೆಕ್ಕಾಧಿಕಾರಿಗಳು, ರಾಮಸಾಗರ ಕಂದಾಯ ವೃತ್ತ, ಕ್ಯಾಸಂಬಳ್ಳಿ ಹೋಬಳಿ, ಕೆ.ಜಿ.ಎಫ್. ತಾಲ್ಲೂಕು, ಕೋಲಾರ ಜಿಲ್ಲೆ ಇವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

*****

1) ಪೋಲೀಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಕೇಂದ್ರ ವಲಯ, ಬೆಂಗಳೂರು ಇವರು ಕೋಲಾರ ಜಿಲ್ಲೆಯ ಭ್ರಷ್ಟಾಚಾರ ನಿಗ್ರಹ ದಳ ಪೋಲೀಸ್ ಠಾಣೆಯ ಪೋಲೀಸ್ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ವರದಿಯಲ್ಲಿ ಶ್ರೀ ಗೋಪಾಲಪ್ಪ ಟಿ. ಬಿನ್ ತಿಮ್ಮರಾಯಪ್ಪ, ಗ್ರಾಮ ಲೆಕ್ಕಾಧಿಕಾರಿಗಳು, ರಾಮಸಾಗರ ಕಂದಾಯ ವೃತ್ತ, ಕ್ಯಾಸಂಬಳ್ಳಿ ಹೋಬಳಿ, ಕೆ.ಜಿ.ಎಫ್. ತಾಲ್ಲೂಕು, ಕೋಲಾರ ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ.) ದೂರುದಾರರಾದ ಶ್ರೀ ಎಂ. ವೆಂಕಟಪ್ಪ ಬಿನ್ ಲೇಟ್ ಗಂಗಪ್ಪ, ಮಹಾದೇವಪುರ ಗ್ರಾಮ, ಕ್ಯಾಸಂಬಳ್ಳಿ ಹೋಬಳಿ, ಕೆ.ಜಿ.ಎಫ್. ತಾಲ್ಲೂಕು, ಕೋಲಾರ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರನ್ವಯ ಸ್ವಯಂ ಪ್ರೇರಿತ ತನಿಖೆ ಕೈಗೊಂಡಿರುತ್ತಾರೆ.

2) **ದೂರಿನ ಸಂಕ್ಷಿಪ್ತ ವಿವರಣೆ:-** ದೂರುದಾರರ ಮಗನಾದ ವಿ.ಮೋಹನಕೃಷ್ಣ ರವರ ಪತ್ನಿ ಶ್ರೀಮತಿ ರೂಪಾ ಇವರ ಹೆಸರಿನಲ್ಲಿ ಮಹಾದೇವಪುರ ಗ್ರಾಮದ ಸರ್ವೆ ನಂ. 56/4 ರಲ್ಲಿ 7 ಎಕರೆ 8 ಗುಂಟೆ ಜಮೀನು ಇದ್ದು ಸದರಿ ಜಮೀನಿನ ಖಾತೆಯು ಮೋಹನಕೃಷ್ಣ ಮತ್ತು ಅವರ ಹೆಂಡತಿ ರೂಪಾರವರ ಹೆಸರಿನಲ್ಲಿ ಜಂಟಿ ಖಾತೆಯಲ್ಲಿದ್ದು ಸದರಿ ಶ್ರೀಮತಿ ರೂಪಾರವರು ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದರಿಂದ ದೂರುದಾರರ ಮಗನಾದ ವಿ. ಮೋಹನಕೃಷ್ಣ ಇವರ ಹೆಸರಿನಲ್ಲಿ

ಪೌತಿ ವಾರಸು ಖಾತೆ ಬದಲಾವಣೆ ಮಾಡಿಕೊಡುವಂತೆ ತಹಸೀಲ್ದಾರ್, ಬಂಗಾರಪೇಟೆ ತಾಲ್ಲೂಕು ಕಛೇರಿಯಲ್ಲಿ ಅರ್ಜಿ ಸಲ್ಲಿಸಿದ್ದು ಸದರಿ ವಾರಸುಖಾತೆ ಮಾಡಿ ಕೊಡಲು ಎದುರುದಾರರು 7,000/- ರೂ.ಗಳಿಗೆ ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದು ನಂತರ ದೂರುದಾರರು ಕೃಷ್ಣಾ ರೆಡ್ಡಿರವರ ಮೊಬೈಲ್‌ನಲ್ಲಿ ಎದುರುದಾರರಿಗೆ ವಾರಸು ಖಾತೆ ಬದಲಾವಣೆ ಬಗ್ಗೆ ಕೇಳಿದಾಗ ಚೌಕಾಶಿ ಮಾಡಿ 3,000/- ರೂ. ತಂದುಕೊಡುವಂತೆ ದೂರುದಾರರಿಗೆ ಹೇಳಿದ್ದು ಸದರಿ ಲಂಚದ ಹಣ ನೀಡಲು ಇಷ್ಟವಿಲ್ಲದ ಕಾರಣ, ದೂರುದಾರರು ಕೋಲಾರ ಜಿಲ್ಲೆ ಎ.ಸಿ.ಬಿ. ಪೊಲೀಸ್ ಠಾಣೆಗೆ ರೆಕಾರ್ಡ್ ಮಾಡಿದ ಸಂಭಾಷಣೆಯೊಂದಿಗೆ ದೂರನ್ನು ದಿನಾಂಕ 10/04/2018 ರಂದು ನೀಡಿರುತ್ತಾರೆ. ಈ ಬಗ್ಗೆ ಕೋಲಾರ ಎ.ಸಿ.ಬಿ. ಠಾಣೆಯ ಅಧಿಕಾರಿಗಳು ದೂರನ್ನು ಪಡೆದು ತಮ್ಮ ಠಾಣೆಯ ಗುನ್ನೆ ನಂ. 04/2018 ರಲ್ಲಿ ಪ್ರಕರಣ ನೋಂದಾಯಿಸಿಕೊಂಡಿರುತ್ತಾರೆ.

3) ತನಿಖಾಧಿಕಾರಿಗಳು ದಿನಾಂಕ 10/04/2018 ರಂದು ನೆರಳು ಸಾಕ್ಷಿ ಹಾಗೂ ಸಹ ಪಂಚರನ್ನು ಬರ ಮಾಡಿಕೊಂಡು ದೂರುದಾರರನ್ನು ಪರಿಚಯಿಸಿ ಅವರಿಂದ ದೂರಿನ ವಿಷಯವನ್ನು ತಿಳಿದ ನಂತರ ರೆಕಾರ್ಡ್ ಮಾಡಿದ ಸಂಭಾಷಣೆಯನ್ನು ಪಂಚರಿಗೆ ಕೇಳಿಸಿ, ಅದನ್ನು ಲಿಪಿಕರಣ ಮಾಡಿ ಅದನ್ನು ಸಿ.ಡಿ.ಗೆ ವರ್ಗಾಯಿಸಿದ್ದು ಇರುತ್ತದೆ. ನಂತರ ಲಂಚದ ಹಣ ರೂ. 3,000/- ದೂರುದಾರರು ಹಾಜರುಪಡಿಸಿದ್ದು ಅವುಗಳ ಮುಖಬೆಲೆ ಮತ್ತು ನೋಟಿನ ಸಂಖ್ಯೆ ಪ್ರತ್ಯೇಕ ಹಾಳೆಯಲ್ಲಿ ನಮೂದಿಸಿ ಪಂಚರು ಮತ್ತು ತನಿಖಾಧಿಕಾರಿಗಳ ಸಹಿ ಪಡೆದಿರುತ್ತಾರೆ. ಸದರಿ ಹಣಕ್ಕೆ ಫಿನಾಪ್ತಲಿನ್ ಪೌಡರ್ ಲೇಪಿಸಿ ಸೋಡಿಯಂ ಕಾರ್ಬೋನೇಟ್ ದ್ರಾವಣ ತಯಾರಿಸಿ ಸದರಿ ದ್ರಾವಣದಲ್ಲಿ ನೋಟುಗಳಿಗೆ ಫಿನಾಪ್ತಲಿನ್ ಪೌಡರ್ ಲೇಪಿಸಿದ ಪಂಚನ ಕೈ ಬೆರಳುಗಳನ್ನು ದ್ರಾವಣದಲ್ಲಿ ಅದ್ದಿ ತೆಗೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ಈ ಬಗ್ಗೆ ಮಾದರಿ ದ್ರಾವಣ ಹಾಗೂ ಗುಲಾಬಿ ಬಣ್ಣಕ್ಕೆ ತಿರುಗಿದ ದ್ರಾವಣವನ್ನು ಪ್ರತ್ಯೇಕವಾಗಿ ವಶಪಡಿಸಿಕೊಂಡು ಹಂತ ಹಂತವಾಗಿ ಫೋಟೋಗಳನ್ನು ತೆಗೆಸಿ ಪ್ರಕರಣದ ಮಾಹಿತಿ ಗೌಪ್ಯತೆಯನ್ನು ಕಾಪಾಡಿಕೊಳ್ಳಲು ತನಿಖಾಧಿಕಾರಿಯವರು ಸೂಚಿಸಿರುತ್ತಾರೆ. ಸಂಭಾಷಣೆಯ ಸಿ.ಡಿ.ಯನ್ನೂ ಸಹ ವಶಪಡಿಸಿ ಕೊಂಡಿರುತ್ತಾರೆ. ಶ್ರೀ ಎಸ್. ಬಸವರಾಜ್ ಬಿನ್ ಸಿದ್ದಲಿಂಗಪ್ಪ ಇವರನ್ನು ನೆರಳು ಸಾಕ್ಷಿಯಾಗಿ ನೇಮಿಸಿ ದೂರುದಾರರೊಂದಿಗೆ ಎದುರುದಾರರ ಬಳಿಹೋಗಿ ಅವರಿಗೆ ಅನುಮಾನ ಬಾರದಂತೆ ಮತ್ತು ಎದುರುದಾರರು ಹಾಗೂ ಪಿರ್ಯಾದಿಯ ನಡುವೆ ನಡೆದ ಸಂಭಾಷಣೆಯನ್ನು ಕೇಳಿಸಿಕೊಂಡು ಘಟನೆಯನ್ನು ವೀಕ್ಷಿಸಿ, ಎದುರುದಾರರು ಹಣವನ್ನು ಕೇಳಿ ಪಡೆದುಕೊಂಡರೆ, ಹಣವನ್ನು ಹೇಗೆ ಪಡೆದುಕೊಳ್ಳುತ್ತಾರೆ, ಹಣವನ್ನು ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂಬುದನ್ನು ಗಮನಿಸಿ ನಂತರ ತಿಳಿಸಬೇಕೆಂದು ತನಿಖಾಧಿಕಾರಿಯವರು

ತಿಳಿಸಿರುತ್ತಾರೆ. ದೂರುದಾರರಿಗೆ ಡಿಜಿಟಲ್ ವಾಯ್ಸ್ ರೆಕಾರ್ಡರನ್ನು ನೀಡಿದ್ದು ಅದನ್ನು ತನ್ನ ಮತ್ತು ಎದುರುದಾರರ ಮಧ್ಯೆ ನಡೆಯುವ ಧ್ವನಿ ಸಂಭಾಷಣೆಯನ್ನು ಮುದ್ರಣ ಮಾಡಿಕೊಳ್ಳಲು ಸೂಚಿಸಿರುತ್ತಾರೆ. ದೂರುದಾರರಿಗೆ ಎದುರುದಾರರು ಲಂಚದ ಹಣ ಬೇಡಿಕೆ ಇಟ್ಟು ಸ್ವೀಕರಿಸಿದ ನಂತರ ತನ್ನ ಭುಜದ ಮೇಲಿನ ಟವೆಲ್ಲಿನಿಂದ ಮುಖ ಒರೆಸಿಕೊಳ್ಳುವುದರ ಮೂಲಕ ಸೂಚನೆ ನೀಡಬೇಕೆಂದು ಸೂಚಿಸಿರುತ್ತಾರೆ. ಈ ಬಗ್ಗೆ ಸವಿಸ್ತಾರ ಪ್ರಾಯೋಗಿಕ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ.

4) ದಿನಾಂಕ 24/04/2018 ರಂದು ಮಧ್ಯಾಹ್ನ 3-45 ಘಂಟೆಗೆ ದೂರುದಾರರು ನೆರಳು ಸಾಕ್ಷಿ ಶ್ರೀ ಎಸ್. ಬಸವರಾಜ ಬಿನ್ ಸಿದ್ದಲಿಂಗಪ್ಪ, ದ್ವಿ.ದ.ಸ. ವಾಣಿಜ್ಯ ತೆರಿಗೆ ಅಧಿಕಾರಿಗಳ ಕಛೇರಿ, ಇವರೊಂದಿಗೆ ಕೋಲಾರ ನಗರಸಭೆ ಕಛೇರಿಯ ಮುಂಭಾಗ ಕಾಯುತ್ತಿದ್ದಾಗ ಎದುರುದಾರರು ಕಛೇರಿಯ ಮುಂಭಾಗದ ಸರ್ಕಾರಿ ಆಸ್ಪತ್ರೆಯ ಕಡೆ ಹೋಗುವ ಫುಟ್ ಪಾತ್ ಮೇಲೆ ನಡೆದುಕೊಂಡು ಹೋಗುತ್ತಿದ್ದು ಅವರನ್ನು ದೂರುದಾರರು ಹಿಂಬಾಲಿಸಿ ಅವರ ಜೊತೆ ಸಂಭಾಷಣೆ ಮಾಡುತ್ತಾ ಹೋಗುತ್ತಿರುವಾಗ ಎದುರುದಾರರು ದೂರುದಾರರಿಂದ ಫಿನಾಪ್ತಲಿನ್ ಲೇಪಿತ ಲಂಚದ ಹಣ 3,000/- ರೂ.ಗಳನ್ನು ಬೇಡಿ ಬಲಗೈಯಿಂದ ಪಡೆದು ತಮ್ಮ ಶರ್ಟಿನ ಎಡಭಾಗದ ಜೇಬಿನಲ್ಲಿ ಇಟ್ಟುಕೊಂಡಿದ್ದು ಇರುತ್ತದೆ. ಆಗ ದೂರುದಾರರು ತನ್ನ ಭುಜದ ಮೇಲಿನ ಟವೆಲ್ಲಿನಿಂದ ಮುಖ ಒರೆಸಿಕೊಳ್ಳುವುದರ ಮೂಲಕ ಸೂಚನೆ ನೀಡಿರುತ್ತಾರೆ. ಅಗ ತನಿಖಾಧಿಕಾರಿಗಳು ಸಿಬ್ಬಂದಿ ಹಾಗೂ ಸಹ ಪಂಚರೊಂದಿಗೆ ಆಗಮಿಸಿ ಎದುರುದಾರರಿಗೆ ತಮ್ಮ ಪರಿಚಯ ನೀಡಿ ತನಿಖೆಗೆ ಸಹಕರಿಸಬೇಕೆಂದು ತಿಳಿಸಿರುತ್ತಾರೆ. ಸದರಿ ಸ್ಥಳವು ತನಿಖೆ ಪ್ರಕ್ರಿಯೆಗಳನ್ನು ಕೈಗೊಳ್ಳಲು ಸೂಕ್ತ ಸ್ಥಳವಲ್ಲವೆಂದು ತಿಳಿಸಿ ಎದುರುಗಡೆ ಇರುವ ಹೆರಿಗೆ ಮತ್ತು ಮಕ್ಕಳ ಆಸ್ಪತ್ರೆ ಒಳಗೆ ಹೋಗಿ ಅಲ್ಲಿ ವೈದ್ಯಾಧಿಕಾರಿಯಿಂದ ಅನುಮತಿ ಪಡೆದು ಕೊಠಡಿಯೊಂದರಲ್ಲಿ ಮುಂದಿನ ಕ್ರಮವನ್ನು ಜರುಗಿಸಿರುತ್ತಾರೆ. ದೂರುದಾರರಿಂದ ಎದುರುದಾರರು ಪಡೆದಂತಹ ಲಂಚದ ಹಣವನ್ನು ಪರಿಶೀಲಿಸಲಾಗಿ ಸದರಿ ಹಣದ ಮೌಲ್ಯ ಮತ್ತು ನೋಟಿನ ಸಂಖ್ಯೆಗಳು ಪ್ರಾಯೋಗಿಕ ಪಂಚನಾಮೆಯಲ್ಲಿ ವಿವರಿಸಿದ ಅವುಗಳ ಮೌಲ್ಯ ಮತ್ತು ನೋಟುಗಳ ಸಂಖ್ಯೆಗೆ ತಾಳೆಯಾಗಿದ್ದು ಇರುತ್ತದೆ. ಸದರಿ ಹಣವನ್ನು ತನಿಖಾಧಿಕಾರಿಗಳು ವಶಪಡಿಸಿಕೊಂಡಿರುತ್ತಾರೆ. ಎದುರುದಾರರ ಎರಡೂ ಕೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೆಗೆದಾಗ ಅವು ತಿಳಿ ಗುಲಾಬಿ ಬಣ್ಣಕ್ಕೆ ಬಂದಿದ್ದು ಸದರಿ ದ್ರಾವಣಗಳನ್ನು ಪಂಚರ ಸಮಕ್ಷಮ ವಶಪಡಿಸಿಕೊಳ್ಳಲಾಯಿತು. ಎದುರುದಾರರಿಗೆ ಬದಲಿ ಶರ್ಟನ್ನು ನೀಡಿ ಅವರು ಹಾಕಿಕೊಂಡ ಶರ್ಟನ್ನು ತೆಗೆಯಿಸಿ ಶರ್ಟಿನ ಎಡ ಜೇಬನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೆಗೆದಾಗ ಅವು ತಿಳಿ ಗುಲಾಬಿ ಬಣ್ಣಕ್ಕೆ

ಬಂದಿರುತ್ತದೆ. ಸದರಿ ದ್ರಾವಣವನ್ನೂ ಸಹ ಪ್ರತ್ಯೇಕವಾಗಿ ಪಂಚರ ಸಮಕ್ಷಮ ವಶಪಡಿಸಿಕೊಳ್ಳಲಾಯಿತು. ಎದುರುದಾರರು ದೂರುದಾರರ ಬಳಿ ಈ ಹಿಂದೆ ಲಂಚಕ್ಕೆ ಒತ್ತಾಯಿಸಿದ ನಡೆದ ಸಂಭಾಷಣೆಯಲ್ಲಿ ಎದುರುದಾರರ ಧ್ವನಿಯನ್ನು ಆತನ ಸಹೋದ್ಯೋಗಿಯಾದ ಶ್ರೀ ಎಸ್. ಮೋಹನವೇಲ್ ಬಿನ್ ಲೇಟ್ ಎನ್. ಷಣ್ಮುಗಂ, ಕಂಗಾಡ್ಲಹಳ್ಳಿ, ಕಂದಾಯವೃತ್ತ, ಕ್ಯಾಸಂಬಳ್ಳಿ ಹೋಬಳಿ ಕೆ.ಜಿ.ಎಫ್. ರವರಿಂದ ಸಿ.ಡಿ.ಯನ್ನು ಲ್ಯಾಪ್‌ಟಾಪ್ ಮುಖಾಂತರ ಹಾಕಿಸಿ ಕೇಳಲಾಗಿ ಅದನ್ನು ಆಲಿಸಿ ಸಂಭಾಷಣೆಯಲ್ಲಿಯ ಧ್ವನಿ ಎದುರುದಾರರ ಧ್ವನಿ ಆಗಿರುತ್ತದೆ ಎಂದು ದೃಢೀಕರಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರ ಪ್ರತಿರಕ್ಷೆ ಕೇಳಲಾಗಿ ಈತನು ತನ್ನ ಹೇಳಿಕೆಯಲ್ಲಿ "ದೂರುದಾರರು ಖಾತೆ ಮಾಡುವ ವಿಚಾರದಲ್ಲಿ ಬಂದಿದ್ದು, ನಾನು ಇವರ ಖಾತೆ ವಿಚಾರದ ಬಗ್ಗೆ ಯಾವುದೇ ತರಹದ ಹಣ ಕೇಳಿರುವುದಿಲ್ಲ. ಈಗಾಗಲೇ ಖಾತೆಯನ್ನು ಮಾಡಿ ಕಛೇರಿಗೆ ಒಪ್ಪಿಸಿರುತ್ತೇನೆ. ನಾನು ಬೇಡ ಅಂದರೂ ನನ್ನ ಜೇಬಿನಲ್ಲಿ ಹಣ ಇಟ್ಟಿರುತ್ತಾರೆ. ಜೇಬಿನಲ್ಲಿ ಹಣವಿಟ್ಟ ಮೇಲೆ ಬಲವಂತವಾಗಿ ದೂರುದಾರರು ನನ್ನ ಬಲಗೈಯನ್ನು ಹಿಡಿದುಕೊಂಡಿರುತ್ತಾರೆ. ನಾನು ಅವರ ಬಳಿ ಯಾವುದೇ ತರಹ ಹಣವನ್ನು ಕೇಳಿರುವುದಿಲ್ಲ. ನನ್ನ ಜೇಬಿನಲ್ಲಿ ಎಷ್ಟು ಹಣ ಇಟ್ಟಿರುತ್ತಾರೆ ಎಂಬ ವಿಷಯವೂ ಸಹ ನನಗೆ ಗೊತ್ತಾಗಿರುವುದಿಲ್ಲ." ಎಂದು ಪ್ರತಿರಕ್ಷೆ ಹೇಳಿಕೆಯಲ್ಲಿ ಹೇಳಿರುತ್ತಾರೆ. ಈ ನಡವಳಿಕೆಯ ಬಗ್ಗೆ ಹಂತ ಹಂತವಾಗಿ ಫೋಟೋಗಳನ್ನು ತೆಗೆದು ತನಿಖಾಧಿಕಾರಿಗಳು ಸವಿಸ್ತಾರ ಪಂಚನಾಮೆ ಬರೆದು ಸೂಕ್ತ ದಾಖಲೆ ಹಾಗೂ ಮುದ್ದೇ ಮಾಲುಗಳನ್ನು ವಶಪಡಿಸಿಕೊಂಡು ಸವಿಸ್ತಾರ ಅಮಾನತ್ ಪಂಚನಾಮೆಯನ್ನು ಜರುಗಿಸಿ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ.

5) ಸದರಿ ಹಣದ ಬಗ್ಗೆ ತನಿಖಾಧಿಕಾರಿಯು ಎದುರುದಾರರನ್ನು ವಿಚಾರಿಸಿದಾಗ ಅವರು ನೀಡಿದ ಪ್ರತಿರಕ್ಷಣಾ ಹೇಳಿಕೆಯು ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಆಗಿರುವುದಿಲ್ಲ ಎಂದು ತನಿಖಾಧಿಕಾರಿಯವರು ಪಂಚನಾಮೆಯಲ್ಲಿ ನಮೂದಿಸಿರುತ್ತಾರೆ.

6) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು, ಎದುರುದಾರರ ದುರ್ನಡತೆಯನ್ನು ತೋರಿಸುತ್ತದೆ.

7) ಧ್ವನಿ ವಿಶ್ಲೇಷಣಾ ವರದಿ, ವಿಧಿ ವಿಜ್ಞಾನ ಪ್ರಯೋಗಾಲಯದಿಂದ ಬಂದಿರುವುದಿಲ್ಲ. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇರುವುದು ದೃಢಪಟ್ಟಿರುತ್ತದೆ.

8) ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಸಮಜಾಯಿಷಿಯನ್ನು ದಿನಾಂಕ 21/10/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ

"ದೂರುದಾರ ವೆಂಕಟಪ್ಪರವರು ಬೇಡವೆಂದರೂ ಸಹ ನನ್ನ ಜೇಬಿನಲ್ಲಿಟ್ಟು ಬಲವಂತವಾಗಿ ನನ್ನ ಬಲಗೈಯನ್ನು ಹಿಡಿದುಕೊಂಡಿರುತ್ತಾನೆ. ನನ್ನ ಜೇಬಿನಲ್ಲಿ ಎಷ್ಟು ಹಣ ಇಟ್ಟಿರುತ್ತಾರೆ ಎಂಬ ವಿಷಯವೂ ಸಹ ನನಗೆ ಗೊತ್ತಾಗಿರುವುದಿಲ್ಲ. ನಾನು ಯಾರ ಬಳಿಯೂ ಹಣವನ್ನು ಕೇಳಿರುವುದಿಲ್ಲ. ನಾನು ಇವರ ಖಾತೆ ಬಗ್ಗೆ ಯಾರನ್ನೂ ಸಂಪರ್ಕಿಸಿರುವುದಿಲ್ಲ ಹಾಗೂ ನಾನು ಯಾರ ಬಳಿಯೂ ಈ ಫವತಿ ವಾರಸು ಖಾತೆ ವಿಚಾರದ ಬಗ್ಗೆ ಮೊಬೈಲ್ ಸಂಭಾಷಣೆಯನ್ನೂ ಸಹ ಮಾಡಿರುವುದಿಲ್ಲ. ನಾನು ಈ ವಿಷಯದಲ್ಲಿ ಯಾವುದೇ ತರಹ ದುರ್ನಡತೆಯನ್ನು ಮಾಡಿರುವುದಿಲ್ಲ" ಎಂದು ಲಿಖಿತ ಸಮಜಾಯಿಷಿ ನೀಡಿರುತ್ತಾರೆ. ಪರಿವೀಕ್ಷಣಾ ಟಿಪ್ಪಣಿಗೆ ನೀಡಿದ ಸಮಜಾಯಿಷಿಯಲ್ಲಿ ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗೆಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಅವರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

9. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ರಾಸಾಯನಿಕ ತಜ್ಞರ ಪರೀಕ್ಷಾ ವರದಿ ಮತ್ತು ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇವುಗಳನ್ನು ಪರಿಶೀಲಿಸಿದಾಗ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆ ತೋರಿಸದೆ, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3 (1) (i ರಿಂದ iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

10. ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) 2021 ನಿಯಮ 3 (1) (i ರಿಂದ iii) ರ ಅಡಿಯಲ್ಲಿ ದುರ್ನಡತೆ/ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸಬೇಕೆಂದೂ ಕೋರಿದೆ.

11. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

8/12/21

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.